**Code No. 16 Y**

ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ

# (ವಿಸ್ತರಿಸುವಿಕೆ)

ಜನವರಿ, 2016

ವೇಳೆ { ಉಕ್ತಲೇಖನ : 5 ನಿಮಿಷಗಳು; ವಿಸ್ತರಣೆ : 3 ಗಂಟೆಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.

3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ ಅವುಗಳನ್ನು ಸ್ವಲ್ಪ ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.

4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ದಿನಾಂಕ 9. 5. 2012 ರಂದು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳಿಗೆ ಹಾಗೂ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರಿಂದ ಹೊರಡಿಸಿದ ಸುತ್ತೋಲೆ.

$\frac{1}{4}$ ಮಾನ್ಯ ಸ/ರ್ವೋಚ್ಚ ನ್ಯಾಯಾಲಯವು ರಿಟ್ ಪಿಟಿಷನ್ (ಸಿವಿಲ್) ಸಂಖ್ಯೆ : 265/2011 ರಲ್ಲಿ ದಿನಾಂಕ 27. 4. 2012 ರಂದು ತೀರ್ಪನ್ನು ನೀಡಿ ಕೇಂದ್ರ ಮೋಟಾರು ವಾಹನಗಳ ನಿಯಮಾವಳಿಗಳ ನಿಯಮ 100ನ್ನು ಕಟ್ಟುನಿಟ್ಟಾಗಿ ಜಾರಿ/ಗೊಳಿಸಲು $\frac{1}{2}$
ನಿರ್ದೇಶನ ನೀಡಿರುತ್ತದೆ. ಆದರಂತೆ ಎಲ್ಲಾ ವಾಹನಗಳ ಮಾಲೀಕರುಗಳು (ಸರ್ಕಾರಿ ವಾಹನಗಳೂ ಸೇರಿ) ತಮ್ಮ ವಾಹನಗಳ ಮುಂಭಾಗ ಮತ್ತು ಹಿಂಭಾಗದ ಗಾಜುಗಳು ಶೇಕಡಾ 70ರಷ್ಟು ಹಾಗೂ ಎರಡೂ ಬದಿ/ಯ $\frac{3}{4}$
ಗಾಜುಗಳು ಶೇಕಡಾ 50 ರಷ್ಟು ಪಾರದರ್ಶಕತೆಯನ್ನು ಹೊಂದಿರಬೇಕು ಮತ್ತು ಬೇರೆ ಯಾವುದೇ ರೀತಿಯ ಇತರೇ ವಸ್ತುಗಳನ್ನು ಅಂಟಿಸುವಂತಿಲ್ಲವೆಂದು ಆದೇಶಿಸಿರುತ್ತದೆ.

[ Turn over

ಅದರಂತೆ ನಡೆದುಕೊಳ್ಳುವುದು ಮತ್ತು ಈ
1 ರೀತಿಯX ಆದೇಶವನ್ನು ಉಲ್ಲಂಘಿಸಿದವರ
ವಿರುದ್ಧ ನಿಯಮಾನುಸಾರ ದಂಡ ವಸೂಲಿ
ಜೊತೆ ಕೇಂದ್ರ ಮೋಟಾರು ವಾಹನ
ಕಾಯ್ದೆಯನುಸಾರ ವಾಹನ ನೋಂದಣಿ
ಅಮಾನತ್ತುಪಡಿಸಲಾಗುವುದು.

(ಅಂಕಗಳು : 25)

***ಪ್ರಶ್ನೆ ಎರಡು :*** ಪದವೀಧರರ ಸಹಕಾರ
$\frac{1}{4}$ ಸಂ/ಘ, ಹಾಸನ, ಇದರ ಮೂವತ್ತನೇ
ಸರ್ವಸದಸ್ಯರ ಸಭೆ, 17. 12. 2014
ಸ್ಥಳ : ರಂಗಮಂದಿರ, ಹಾಸನ,
ಅಧ್ಯಕ್ಷರು : ಅರುಣಕುಮಾರ್, ಕಳೆದ ಸಾಲಿನ
ಸಭೆಯ ನಡವಳಿಕೆಗಳ ದೃಢೀಕರಣ, ಪ್ರಸಕ್ತ
$\frac{1}{2}$ ವರ್ಷದ ಕಾ/ರ್ಯಕಾರಿ ಮಂಡಳಿಯ ವರದಿ
ಮತ್ತು ಪರಿಶೀಲನೆಯಾದ ಲೆಕ್ಕಪತ್ರಗಳ
ಅಂಗೀಕಾರ, ವರ್ಷದಲ್ಲಿ ಬಂದ ಲಾಭದ
ಹಂಚಿಕೆ. ಮುಂದಿನ ವರ್ಷದ ಆಯವ್ಯಯ
ಅಂದಾಜಿನ ಅಂಗೀಕಾರ. ಆಡಳಿತ ಮಂಡಳಿಯ
$\frac{3}{4}$ ಠರಾವುಗಳು, ಅಧ್ಯಕ್ಷ/ರ ಮೇರೆಗೆ ಇತರ
ವಿಷಯಗಳು. ವಂದನಾರ್ಪಣೆ. ವರದಿಯ
ಪ್ರತಿಗಳು ಸಕಾಲದಲ್ಲಿ ತಲುಪಲಿಲ್ಲವೆಂದು ಕೆಲವು
ಸದಸ್ಯರ ಆಕ್ರೋಶ, ಪ್ರತಿಭಟನೆ. ಮುಂದೆ ಈ
ರೀತಿ ಆಗದಂತೆ ಅಧ್ಯಕ್ಷರ ಆಶ್ವಾಸನೆ.
2 ಕೇಶವಮೂರ್ತಿ ಇXವರುಗಳು ಮಾತನಾಡಿ
ಲೆಕ್ಕಪತ್ರಗಳನ್ನು ಸರಿಯಾಗಿ ನಿಯಮಾನುಸಾರ
ತಯಾರಿಸಬೇಕೆಂದರು. ನಿವೃತ್ತ ಕಾರ್ಯದರ್ಶಿ
ರಾಮಪ್ಪ ಅವರ ಹೆಸರಿನಲ್ಲಿ ಬಾಕಿ
ವಸೂಲಿಯನ್ನು ವಸೂಲಾಗದ ಹಣವೆಂದು
ಘೋಷಿಸಬೇಕೆಂದರು ಪ/ರಮಶಿವಯ್ಯನವರ $\frac{1}{4}$
ಸೂಚನೆಗೆ ಸಭೆಯು ಅನುಮೋದನೆ.
ಆಯವ್ಯಯ ಅಂದಾಜಿನ ಮೇಲೆ
ಶಿವಮೂರ್ತಿ, ಕುಮಾರ್ ಅವರಿಂದ ಸಲಹೆ
ಸೂಚನೆಗಳು. ಸ್ವಾಗತ ಮಾಡಿದವರು
ಸಹಕಾರ್ಯದರ್ಶಿ ಮಂಜುನಾಥ.
ನೋಟೀಸಿನ ದಿನಾಂಕ/ 2. 12. 2014. $\frac{1}{2}$

**ಈ ಬಗ್ಗೆ ತಿಳುವಳಿಕೆ ನೋಟೀಸು ಮತ್ತು ಸಭೆ ನಡುವಳಿಕೆ ತಯಾರಿಸಿ.**

(ಅಂಕಗಳು : 30)

***ಪ್ರಶ್ನೆ ಮೂರು :*** ಕರ್ನಾಟಕ ಮಾಹಿತಿ
ಆಯೋಗ, ಬೆಂಗಳೂರು, ಇಲ್ಲಿ ಖಾಲಿ ಇರುವ
ಮುಖ್ಯ ಮಾಹಿತಿ ಆಯುಕ್ತರು ಹಾಗೂ
ಮಾಹಿತಿ ಆಯುಕ್ತರುಗ/ಳ ನೇಮಕಾತಿ $\frac{3}{4}$
ಕುರಿತಂತೆ ಅಧೀನ ಕಾರ್ಯದರ್ಶಿ, ಸಿ ಮತ್ತು
ಆ ಸು ಇಲಾಖೆಯವರು ಹೊರಡಿಸಿದಂತೆ
ಅಧಿಸೂಚನೆಯನ್ನು ತಯಾರಿಸಿ.

2015ನೇ ಸಾಲಿನಲ್ಲಿ
ಖಾಲಿಯಾಗಲಿರುವ ಮುಖ್ಯ ಮಾಹಿತಿ
ಆಯುಕ್ತರು ಹಾಗೂ ಮಾಹಿತಿ ಆXಯುಕ್ತರ 3

ಹುದ್ದೆಗಳಿಗೆ ಸೂಕ್ತ ಅರ್ಹತೆಯುಳ್ಳವರನ್ನು ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂಥವರು ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು. ಈ ಹುದ್ದೆಯು
$\frac{1}{4}$ 5 ವರ್ಷ ಅಥವಾ ಅಧಿಕಾರಿಗೆ 65 ವ/ರ್ಷ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಇರುತ್ತದೆ. ಮುಖ್ಯ ಮಾಹಿತಿ ಆಯುಕ್ತರ ಸಂಬಳ ಇತ್ಯಾದಿಗಳು ಚುನಾವಣೆ ಆಯುಕ್ತರಿಗೆ ಸಮನಾಂತರವಾಗಿರುತ್ತದೆ. ಹಾಗೂ ರಾಜ್ಯ ಮಾಹಿತಿ ಆಯುಕ್ತರ ಸಂಬಳ
$\frac{1}{2}$ ಇತ್ಯಾದಿ/ಗಳು ಮುಖ್ಯ ಕಾರ್ಯದರ್ಶಿಯವರು ಪಡೆಯುವ ಸಂಬಳ ಮತ್ತು ಭತ್ಯೆಗಳಿಗೆ ಸಮನಾಗಿರುತ್ತದೆ.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಸೇವೆಯಲ್ಲಿದ್ದಲ್ಲಿ ಸಮುಚಿತ ಮಾರ್ಗದ ಮೂಲಕ
$\frac{3}{4}$ ಹಾಗೂ ಇತರೆಯವರು ನೇರವಾಗಿ ದಿ/ನಾಂಕ 2. 7. 2015ರಳೊಗೆ ಸಲ್ಲಿಸಬಹುದಾಗಿದೆ.

(ಅಂಕಗಳು : 25)

***ಪ್ರಶ್ನೆ ನಾಲ್ಕು :*** ಕರ್ನಾಟಕ ಸರ್ಕಾರದ ಸಚಿವಾಲಯ ಹಾಗೂ ಕರ್ನಾಟಕ ವಿಧಾನ ಮಂಡಲದ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಕಾರ್ಯದರ್ಶಿ
4 ಮತ್ತು ಆXಪ್ತ ಕಾರ್ಯದರ್ಶಿ–ಗ್ರೇಡ್–2 ವೃಂದದ ಅಧಿಕಾರಿಗಳಿಗೆ "ಮಾಹಿತಿ ಹಕ್ಕು ಅಧಿನಿಯಮ–2005, ಸಕಾಲ" ಕುರಿತು ದಿನಾಂಕ : 7. 9. 2015 ಮತ್ತು 8. 9. 2015ರಂದು ತರಬೇತಿ ಕಾರ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ/. $\frac{1}{4}$

ತರಬೇತಿ ಕಾರ್ಯಕ್ರಮಕ್ಕೆ ನಿಯೋಜನೆಗೊಂಡಿರುವ ಪ್ರಶಿಕ್ಷಣಾರ್ಥಿಗಳು ತಪ್ಪದೆ ಈ ತರಬೇತಿಯ ಕಾರ್ಯಕ್ರಮಕ್ಕೆ ಹಾಜರಾಗಿ ಇದರ ಪೂರ್ಣ ಪ್ರಯೋಜನವನ್ನು ಪಡೆಯುವುದು.

ತರಬೇತಿಗೆ ಆಯ್ಕೆಯಾದವರು ಯಾವುದೇ
ಕಾರ/ಣಕ್ಕೂ ತರಬೇತಿಗೆ ಗೈರು $\frac{1}{2}$
ಹಾಜರಾಗುವಂತಿಲ್ಲ. ತರಬೇತಿಗೆ ಹಾಜರಾಗುವುದು ಐಚ್ಛಿಕವಲ್ಲ, ಕಡ್ಡಾಯ. ಗುರುತರವಾದ ಕಾರಣಗಳಿಲ್ಲದೆ ಗೈರು ಹಾಜರಾದಲ್ಲಿ ತರಬೇತಿಗೆ ತಗಲುವ ವೆಚ್ಚವನ್ನು
ಸಂಬಂಧಿಸಿದ ಪ್ರಶಿ/ಕ್ಷಣಾರ್ಥಿಗಳಿಂದ ವಸೂಲು $\frac{3}{4}$
ಮಾಡಲಾಗುವುದು. ನಿಯೋಜನೆಗೊಂಡಿರುವ ಅಧಿಕಾರಿಗಳು ತರಬೇತಿಗೆ ಹಾಜರಾಗಲು ಕೋರಿದೆ. ಉಪ ನಿರ್ದೇಶಕರು, ಸಚಿವಾಲಯ ತರಬೇತಿ ಸಂಸ್ಥೆ ಇವರಿದ ಅಧಿಕೃತ ಜ್ಞಾಪನ
ತಯಾರಿಸಿ.X (ಅಂಕಗಳು : 20) 5